'ಉಣಹೋಗಪ ಪಟೇಲ! ನಾನು ಹೋಗ್ತಿನಿ' ಎಂದು ಎದ್ದು ನಿಂತ.

'ಸರಿ ಒಳ್ಳೇದು' ಎಂದು ತಾನು ಮಂಚ ಇಳಿದ ಅನಂತರೆಡ್ಡಿ.

ಆತ, ಆತನ ತಾಯಿ, ಮೂರು ಮಕ್ಕಳೂ ಊಟಕ್ಕೆ ಕುಳಿತರು. ಹೆಂಡತಿ ಬಡಿಸುತ್ತಿದ್ದಾಳೆ. ಗಂಡು ಮಕ್ಕಳಿಬ್ಬರೂ ಸಣ್ಣವರು. ಪಕ್ಕದ ಊರಿಗೆ ಹೋಗಿ ಓದಿಕೊಳ್ಳುತ್ತಾರೆ. ಒಬ್ಬಳೇ ಮಗಳು. ದೊಡ್ಡವಳು. ಮದುವೆಯಾದರೂ ಇನ್ನೂ ಗಂಡನ ಮನೆಗೆ ಹೋಗಿಲ್ಲ. ತಾಯಿ ಪಾರ್ವತಮ್ಮ. ವ್ಯವಸಾಯದ ಕೆಲಸ ನೋಡಿಕೊಂಡರೆ, ಹೆಂಡತಿ ಸುಶೀಲ ಮನೆಗೆಲಸ ನೋಡಿಕೊಳ್ಳುತ್ತಾಳೆ. ಇದು ಅವನ ಕುಟುಂಬದ ವಿವರ.

'ನಾಳೆ ಕೂಲಿಯೋರು ಏನ್ಮಾಡ್ತರಂತೆಪಾ?' ಎಂದು ತಾಯಿ ಪಾರ್ವತಮ್ಮ ಊಟ ಮಾಡುವಾಗ ಕೇಳಿದಳು.

'ಹತ್ತಿ ಹೊಲಕ್ಕ ಕುಂಟೆಕಟ್ಬೇಕಾಗಿತ್ತು, ಮೊನ್ನೆ ಒಂದು ತಾಳು ಮುರಿದೋಗೈತೆ. ನಾಳೆ ಬಡಿಗಾರನತ್ರ ಸರಿಮಾಡಿಸಿ, ನಾಡಿದ್ದಾದ್ರೆ ಕಟ್ಬೇಕು. ಇಲ್ದಿದ್ರೆ ಹೊಲ ಇನ್ನೀಟು ಬೀಳು ಬೀಳ್ತೈತೆ' ಅನ್ನಕ್ಕೆ ಸಾಂಬಾರು ಕಲಿಸುತ್ತಾ ಹೇಳಿದ.

'ಕುಂಟೆ ನಾಳೆ ಕಟ್ಟಂಗಿದ್ರೆ ಹೆಣ್ಣಾಳುಗಳನ್ನ ಕರಿತೀನಿ, ಅಲ್ಲಲ್ಲಿ ಗಡ್ಡೆಮೇಲೆ ಕರಿಕೆ ಕಡ್ಡಿ ಬೆಳೆದೈತೆ, ಕಳೇವು ತೆಗಸ್ತೀನಿ.'

'ಆಗಲಿ ಕಳೇವು ತಗಸು, ಆದರೆ ಮಂದಿ ಸಿಗತಾರೋ ಇಲ್ಲೊ.'

'ಹೌದಪ್ಪೋ, ಹತ್ರೂಪಾಯಿ ಕೊಡ್ತೇವಂದ್ರೂ ಒಬ್ಬ ಮನಿಷ ಕೂಡ ಸಿಗುವಲ್ಲ. ಅರ್ಧ ಎಕರೆ ಇದ್ದೋನು ಹತ್ತಿಹೊಲ, ಅರವತ್ತೆಕರೆ ಇದ್ದೋನು ಗುಡ ಹತ್ತಿಹೊಲವಾದ್ರೆ ಕೂಲಿ ಮಂದಿ ಎಲ್ಲಿ ಸಿಗತಾರ.'

'ಐದಾರು ಮಂದಿ ಬಂದ್ರೂ ಸಾಕು.'

'ಮಸರು ಹಾಕ್ಕೆಳ್ಳಪ್ಪಾ' ಸಾಂಬಾರಿನೊಂದಿಗೆ ಮುಗಿಸಿ ಕೈ ತೊಳೆಯುತ್ತಿದ್ದ ಅಪ್ಪನನ್ನು ಕೇಳಿದಳು ಭಾರ್ಗವಿ.

'ಬ್ಯಾಡ ಬುಡಮ್ಮಾ! ತಲೆವಜ್ಜೈತೆ' ಎನ್ನುತ್ತಾ ಎದ್ದ.

ಒಬ್ಬನೇ ಬಾಗಿಲಿಗೆ ಬರುವುದರೊಳಗೆ ಹತ್ತಿಹೊಲದ ಬುಗುಲಿನ ಮೋಡಗಳು ಮತ್ತೆ ಆವರಿಸಿಕೊಂಡವು ಅವನನ್ನು.

'ಮಳೆ ಬಂದ್ರೆ ಬೇಸಿತ್ತು, ಮಳೆ ಬಂದ್ರೆ ಬೇಸಿತ್ತು' ಬಾಗಿಲಲ್ಲಿ ಅಡ್ಡಾಡುತ್ತಿದ್ದಾನೆ ದಿಗಿಲಿನಿಂದ.

ಮನೆಯೊಳಗೆ ಸೆಖೆಯಾಗುತ್ತದೆಂದು ಮಕ್ಕಳು ಮಾಳಿಗೆ ಮೇಲೆ ಮಲಗಲು ಹೋಗುತ್ತಿದ್ದಾರೆ. ತಾಯಿ ವರಾಂಡದಲ್ಲಿಯೇ ತಲೆಯಿಟ್ಟಳು.

'ನೀನು ಇಲ್ಲೆ ಮಕ್ಕಂತೀಯಾ, ಮಾಳಿಗೆ ಮ್ಯಾಕ ಬರತೀಯಾ' ಮನೆಗೆ ಬೀಗಹಾಕಿ ಹೊರಗೆ ಬರುತ್ತಾ ಗಂಡನನ್ನು ಕೇಳಿದಳು ಸುಶೀಲ.

'ಮನೆಮುಂದೆ ಅಮ್ಮ ಒಬ್ಬಾಕೆ ಆಗತಾಳ. ನಾನೀ ಬಾಗಲ್ಯಾಗ ಮಕ್ಕಂತಿನಿ ಬಿಡು.'

'ಚೆಂಬು ನೀರು ಹೊರಗ ತಂದಿಯಾ?'

'ತಂದೀನಿ, ಕಟ್ಟೆಮ್ಯಾಲಿಟ್ಟೀನಿ.'

'ಕುಂದುರು' ಅಂದ ಅನಂತರೆಡ್ಡಿ ತನ್ನ ಮಂಚದ ಮೇಲೆ ಕೂರುತ್ತಾ.

'ಕೆಳಗ ಕುಂದ್ರುತಿನಿ ಬಿಡು' ಅತ್ತೆಯ ಭಯದಿಂದ ಮಂಚದ ಮೇಲೆ ಕುಳಿತುಕೊಳ್ಳದೇ ನೆಲದಮೇಲೆ ಕುಳಿತಳು ಸುಶೀಲ.